


**ಅನನ್ಯ ಪ್ರತಿಭೆಯ ಪರಿ**

(ಡಾ. ಡಿ.ಆರ್. ನಾಗರಾಜ್ ಅವರ ಸಾಹಿತ್ಯ–ಸಂಸ್ಕೃತಿ, ವಿಮರ್ಶೆ, ಸಂಶೋಧನೆ, ಅನುವಾದ ಗ್ರಂಥಗಳ ಕುರಿತ ವಿಮರ್ಶಾ ಬರಹಗಳು)

ಸಂ: ಶಿವರಾಜ ಬ್ಯಾಡರಹಳ್ಳಿ

ಪು: 488 ಬೆ: 500

ಪ್ರ: ಕಿರಂ ಪ್ರಕಾಶನ

ನಂ. 173, 7ನೇ ಮುಖ್ಯ ರಸ್ತೆ, 24ನೇ 'ಸಿ' ಕ್ರಾಸ್, ನಾಗರಬಾವಿ ಮುಖ್ಯ ರಸ್ತೆ, ಗೋವಿಂದರಾಜ ನಗರ, ಬೆಂಗಳೂರು – 560 079

ದೂರವಾಣಿ : 98444 67351

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**

'ಮಹಾಪ್ರಯಾಣ' ಹೋಗುತ್ತ ಹೋಗುತ್ತ ಪಡೆದ ವಿಸ್ತಾರ ಮತ್ತು ಆಳ ಬೆರಗುಗೊಳಿಸುತ್ತಾ ಹೋಗುತ್ತದೆ. ವಿಮರ್ಶೆಯನ್ನು ಪಠ್ಯವಿಮರ್ಶೆಯ ಪರಿಧಿಯಿಂದ ಹೊರತಂದು, ಅದನ್ನೇ ಲೋಕವಿಮರ್ಶೆಯ ಪರಿಕರವಾಗಿ ಬಳಸುತ್ತಾ ಡಿ.ಆರ್. ನಾಗರಾಜ್, ಸಾಹಿತ್ಯ ವಿಮರ್ಶಕನ ಸ್ಥಾನವನ್ನು ಸಮಾಜವಿಜ್ಞಾನಿಯ ಮಟ್ಟಕ್ಕೆ ತರುತ್ತಲೇ, ಆತನಿಗೆ/ಆಕೆಗೆ ಅಸಾಧಾರಣವಾದ ಸಾಮಾಜಿಕ ಮತ್ತು ನೈತಿಕ ಹೊಣೆಗಾರಿಕೆಯನ್ನೂ ಹೊರಿಸುತ್ತಾ ಹೋದರು. ಈ ಕಾರಣಕ್ಕಾಗಿಯೇ ಸಾಹಿತ್ಯ ವಿಮರ್ಶೆಯು ಸಾಂಸ್ಕೃತಿಕ ವಿಮರ್ಶೆಯಾಗುತ್ತಲೇ ಸಮುದಾಯದ ಸಂರಚನೆ, ಆಗು ಹೋಗುಗಳ ಮೇಲೆ ಮಾತನಾಡಲೇ ಬೇಕಾದ ಅಗತ್ಯವನ್ನು ಕಂಡುಕೊಳ್ಳುತ್ತಾ ಹೋಯಿತು.

ಈ ಸಂಪಾದಿತ ಕೃತಿಯು ಅವರ ಪ್ರತಿ ಪಠ್ಯಗಳ ಮೇಲೆ ವಿದ್ವಾಂಸರು ಬರೆದ ಲೇಖನಗಳನ್ನೂ, ಇತರ ಮಹತ್ವದ ಲೇಖನಗಳನ್ನೂ ಹುಡುಕಿ, ಆಯ್ದು ಪೋಣಿಸಿದೆ. ಹೀಗಾಗಿ, ಈ ಕೃತಿಯ ಓದು ಮೇಕಿಂಗ್ ಆಫ್ ಡಿ.ಆರ್. ನಾಗರಾಜರ ಚಿತ್ರವನ್ನು ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗುತ್ತದೆ.

ಇವರ ಮೊದಲ ಕೃತಿ 'ಅಮೃತ ಮತ್ತು ಗರುಡ'ದ ಬಗ್ಗೆ ಹಿರಿಯರಾದ ರಂ.ಶ್ರೀ. ಮುಗಳಿಯವರ ಲೇಖನವಿದೆ. ಸಾಂಪ್ರದಾಯಿಕ ವಿಮರ್ಶಾ ಮಾದರಿಗಿಂತ ಭಿನ್ನವಾದುದನ್ನು ಕಟ್ಟಲು ಹೊರಟ ತರುಣನೊಬ್ಬನ ಕೃತಿಯನ್ನು ಮುಗಳಿಯವರು ಗಾಂಭೀರ್ಯ ಮತ್ತು ವಸ್ತುನಿಷ್ಠತೆಯಲ್ಲಿ ಚರ್ಚಿಸಿದ್ದಾರೆ. ರಸಸ್ವಾದಿ ಮಾದರಿಗಿಂತ ಭಿನ್ನವಾದ ಮಾರ್ಕ್ಸ್‌ವಾದಿ ತಾತ್ವಿಕತೆಯಿಂದ ಆಕರ್ಷಿತನಾದ, ಸಾಹಿತ್ಯ ಮತ್ತು ವಿಮರ್ಶೆಗಳು ಅಂತಿಮವಾಗಿ ಕೋಲಮುಖಿಯೂ ಜನಪರವೂ ಆಗಿರಬೇಕು ಎನ್ನುವುದನ್ನು ಗಾಢವಾಗಿ ನಂಬಿದ ಯುವಕನ